# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ,ನಂ. 569/2018**

| | |
|---|---|
| ಫಿರ್ಯಾದಿ | ಆರಕ್ಷಕ ಉಪನಿರೀಕ್ಷಕರು, ಟ್ರಾಫಿಕ್ ಪೊಲೀಸ್ ಠಾಣೆ, ನಂಜನಗೂಡು. |
| | ವಿರುದ್ಧ |
| ಆರೋಪಿ | ಹರೀಶ್ ಎ ಎಸ್ , 32 ವರ್ಷ , ವಾಸಃ ಆಲಂಬಾಡಿ ಗ್ರಾಮ , ಅಕ್ಕಿಹೆಬ್ಬಾಳ , ಕೆ ಆರ್ ಪೇಟೆ ತಾಲ್ಲೂಕು. |

## ಆರೋಪಣೆ

ಶ್ರೀಮತಿ ವಿನುತ ಡಿ. ಎಸ್., ಬಿ.ಎಸ್ಸಿ (ಸೆರಿಕಲ್ಚರ್) , ಎಲ್.ಎಲ್.ಬಿ. *2ನೇ ಹೆಚ್ಚುವರಿ ಸಿವಿಲ್* ಜಡ್ಜ್ ಮತ್ತು ಜೆ.ಎಂ.ಎಫ್.ಸಿ. *ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ಮೊದಲನೇಯದಾಗಿ , ನಂಜನಗೂಡು ಟ್ರಾಫಿಕ್ ಪೊಲೀಸ್ ಠಾಣಾ ಸರಹದ್ದು , ಹುಲ್ಲಹಳ್ಳಿ ಸರ್ಕಲಿನಲ್ಲಿ ಇರುವ ಪೊಲೀಸ್ ಚೌಕಿ ಹತ್ತಿರ ದಿನಾಂಕಃ 30.5.2017 ರಂದು ಸುಮಾರು ಬೆಳಗಿನ ಜಾವ 5.45 ಗಂಟೆ ಸಮಯದಲ್ಲಿ ಚಾಸಾ-2 ರವರು ತಮ್ಮ ಬಾಬ್ತು ಕೆಎ 05 ಎಂ ಆರ್ 9564 ರ ನಂಬರಿನ ಕಾರಿನಲ್ಲಿ ಚಾಸಾ-3 ರಿಂದ 8 ರವರುಗಳನ್ನು ಕೂರಿಸಿಕೊಂಡು ಮೈಸೂರು ಕಡೆಯಿಂದ ಗುಂಡ್ಲುಪೇಟೆ ಕಡೆಗೆ ಹೋಗುತ್ತಿದ್ದಾಗ ಗುಂಡ್ಲುಪೇಟೆ ಕಡೆಯಿಂದ ನಂಜನಗೂಡು ಕಡೆಗೆ ಬರುತ್ತಿದ್ದ ಆರೋಪಿಯಾದ ನೀವು ನಿಮ್ಮ ಬಾಬು ಕೆಎ 10 ಎಫ್ 0014 ರ ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದಿದ್ದು , ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 279 ರ ಪ್ರಕಾರ ಶಿಕ್ಷಾರ್ಹ ಅಪರಾದವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ , ಅದೇ ದಿನ , ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಹಾಗೂ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಪೊಲೀಸ್ ಚೌಕಿ ಹತ್ತಿರ ಬಲಭಾಗಕ್ಕೆ

ಚಾಸಾ-2 ರವರ ಬಾಬ್ತು ವಾಹನ

ತಿರುಗಿಸಿಕೊಂಡು ಮೈಸೂರು ಕಡೆಯಿಂದ ಬರುತ್ತಿದ್ದ ಕೆಎ 05 ಎಂ ಆರ್ 9564ರ ನಂಬರಿನ ಕಾರಿಗೆ ಎದುರುಗಡೆಯಿಂದ ಬಂದು ಡಿಕ್ಕಿ ಮಾಡಿದ್ದು , ಈ ಅಪಘಾತದಿಂದ ಚಾಸಾ-3 ರವರಿಗೆ ಎಡ ದವಡೆಯ ಮೂಳೆಗಳಿಗೆ , ತಲೆಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ ಕಾರಣ ಆರೋಪಿಯಾದ ನೀವು ಭಾ ದಂ ಸಂ ಕಲಂ 338ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ , ಅದೇ ದಿನ , ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಹಾಗೂ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಪೊಲೀಸ್ ಚೌಕಿ ಹತ್ತಿರ ಬಲಭಾಗಕ್ಕೆ ತಿರುಗಿಸಿಕೊಂಡು ಮೈಸೂರು ಕಡೆಯಿಂದ ಬರುತ್ತಿದ್ದ ಕೆಎ 05 ಎಂ ಆರ್ 9564ರ ನಂಬರಿನ ಕಾರಿಗೆ ಎದುರುಗಡೆಯಿಂದ ಬಂದು ಡಿಕ್ಕಿ ಮಾಡಿದ್ದು , ಈ ಅಪಘಾತದಿಂದ ಚಾಸಾ-2 ರವರಿಗೆ ಹಣೆಯ ಮತ್ತು ಮೂಗಿನ ಮೇಲೆ , ಎದೆಯ ಭಾಗದಲ್ಲಿ ಮತ್ತು ಎರಡು ಕೈಗಳಿಗೆ ಗಾಯವಾಗಿದ್ದು , ಚಾಸಾ-3 ರವರಿಗೆ ತಲೆಯ ಎಡಭಾಗದಲ್ಲಿ ಮುಖದ ಎಡಭಾಗಕ್ಕೆ ಗಾಯವಾಗಿದ್ದು , ಚಾಸಾ-5 ರಿಂದ 8 ರವರುಗಳಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು , ಚಾಸಾ-2 ರವರಿಗೆ ಹಣೆಯ ಮತ್ತು ಮೂಗಿನ ಮೇಲೆ , ಎದೆಯ ಬಾಗದಲ್ಲಿ ಮತ್ತು ಎರಡು ಕೈಗಳಿಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿದ್ದು , ಚಾಸಾ-4 ರವರ ಹಣೆಯ ಮೇಲೆ ಮತ್ತು ತಲೆಯ ಎಡಭಾಗಲ್ಲಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ ಕಾರಣ ಆರೋಪಿಯಾದ ನೀವು ಭಾ ದಂ ಸಂ ಕಲಂ 337ರ ಪ್ರಕಾರ ಶಿಕ್ಷಾರ್ಹ ಅಪರಾವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಸದರೀ ಆರೋಪಿಣೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾ ಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

**ಪ್ರಶ್ನೇ:1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

ಉತ್ತರ:- ತಿಳಿಯಿತು.

**ಪ್ರಶ್ನೆ:2: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರೋ?**

ಉತ್ತರ:- ತಪ್ಪು ಮಾಡಿಲ್ಲ. ವಿಚಾರಣೆಯಾಗಲಿ.

ಮೇಲ್ಕಂಡ ಅಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿಃ ~~25/7/2019~~ 26/8/2019 ರಂದು ದೃಢೀಕರಿಸುತ್ತೇನೆ.

Sd/- 26/8/2019

2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು